**SAT(K-8)**

Question Booklet Sl. No.

# N M M S

## DEPARTMENT OF STATE EDUCATIONAL RESEARCH AND TRAINING

NO. 4, 100 FT. RING ROAD, BANASHANKARI, 3RD STAGE, BANGALORE – 560 085

**ಎನ್.ಎಂ.ಎಂ.ಎಸ್. ಪರೀಕ್ಷೆ, ನವೆಂಬರ್, 2013**

**NMMS EXAMINATION, NOVEMBER 2013**

**ಪತ್ರಿಕೆ – II /PAPER – II** **ತರಗತಿ – 8/CLASS – 8**

ವ್ಯಾಸಂಗಿಕ ಪ್ರವೃತ್ತಿ ಪರೀಕ್ಷೆ /**SCHOLASTIC APTITUDE TEST**

| REGISTER NO : | 1 | 4 | 1 | 1 | 3 | | | | | | | |
|---|---|---|---|---|---|---|---|---|---|---|---|---|

ಸಮಯ : 90 ನಿಮಿಷಗಳು | **ಇಂಗ್ಲಿಷ್ /ಕನ್ನಡ** | ಗರಿಷ್ಠ ಅಂಕಗಳು : 90

**TIME : 90 MINUTES** | **ENGLISH / KANNADA** | **MAX. MARKS : 90**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಬಿಡಿ ಓ.ಎಮ್.ಆರ್. (OMR) ಉತ್ತರ ಪತ್ರಿಕೆ ಮತ್ತು 90 ಪ್ರಶ್ನೆಗಳಿರುವ ಪ್ರಶ್ನೆ ಪುಸ್ತಿಕೆಯನ್ನು ನಿಮಗೆ ನೀಡಲಾಗಿದೆ
2. ಎಲ್ಲಾ ಪ್ರಶ್ನೆಗಳು ಕಡ್ಡಾಯ, ಪ್ರತೀ ಪ್ರಶ್ನೆಗೆ ಒಂದು ಅಂಕವಿದೆ.
3. ಪರೀಕ್ಷಾ ಅವಧಿಯಲ್ಲಿ,
   - ಪ್ರತಿ ಪ್ರಶ್ನೆಯನ್ನು ಜಾಗರೂಕತೆಯಿಂದ ಓದಿರಿ.
   - ಓ.ಎಮ್.ಆರ್. (OMR) ಪುಟದಲ್ಲಿ ಪ್ರತಿ ಪ್ರಶ್ನೆ ಸಂಖ್ಯೆಗೆ ಸರಿ ಹೊಂದುವ ಉತ್ತರವನ್ನು ಗುರುತಿಸಲು ನೀಡಲಾಗಿರುವ ನಾಲ್ಕು ವೃತ್ತಗಳ ಪೈಕಿ ಸರಿಯಾದ ಉತ್ತರದ ವೃತ್ತವನ್ನು ನೀಲಿ/ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸಿ ಗುರುತು ಮಾಡಿ. ಒಮ್ಮೆ ಉತ್ತರವನ್ನು ಶೇಡ್ ಮಾಡಿದ ಮೇಲೆ ಬದಲಾಯಿಸಲು ಅವಕಾಶವಿಲ್ಲ ಮತ್ತು ಯಾವುದೇ ಅನಗತ್ಯ ಗುರುತುಗಳನ್ನು ಓ.ಎಮ್.ಆರ್. (OMR) ಉತ್ತರ ಪತ್ರಿಕೆಯ ಮೇಲೆ ಮಾಡಕೂಡದು.
   - ಉದಾ : 20 ನೇ ಪ್ರಶ್ನೆಯ ಸರಿ ಉತ್ತರವು ಕ್ರ.ಸಂ. 3 ಆಗಿದ್ದಲ್ಲಿ ಓ.ಎಮ್.ಆರ್. (OMR) ಪುಟದಲ್ಲಿ ಕ್ರ.ಸಂ. 20 ರ ಮುಂದೆ ಈ ರೀತಿ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಉಪಯೋಗಿಸಿ ವೃತ್ತವನ್ನು ಗುರುತು ಮಾಡುವುದು. ಈ ಕೆಳಗೆ ತೋರಿಸಿದಂತೆ ಸಂಪೂರ್ಣವಾಗಿ ತುಂಬಬೇಕು.

   20. ① ② ● ④ (ಇದು ಉದಾಹರಣೆ ಮಾತ್ರ)
4. ಒಂದು ಪ್ರಶ್ನೆಗೆ ಉತ್ತರವಾಗಿ ಒಂದಕ್ಕಿಂತ ಹೆಚ್ಚು ವೃತ್ತಗಳನ್ನು ಗುರುತು ಮಾಡಿದಲ್ಲಿ ಅಂತಹ ಉತ್ತರಗಳನ್ನು ತಪ್ಪೆಂದು ಪರಿಗಣಿಸಿ ಅಂಕಗಳನ್ನು ನೀಡಲು ಬರುವುದಿಲ್ಲ.
5. ಓ.ಎಮ್.ಆರ್. (OMR) ಪುಟದಲ್ಲಿ ನಿಗದಿತ ಸ್ಥಳದಲ್ಲಿ ಅಭ್ಯರ್ಥಿ ಹಾಗೂ ಕೊಠಡಿ ಮೇಲ್ವಿಚಾರಕರು ತಪ್ಪದೇ ಸಹಿ ಮಾಡಬೇಕು.
6. ಪರೀಕ್ಷಾ ಅವಧಿ ಮುಗಿದ ನಂತರ ಉತ್ತರಿಸಿದ ಓ.ಎಮ್.ಆರ್. (OMR) ಪುಟವನ್ನು ಕೊಠಡಿ ಮೇಲ್ವಿಚಾರಕರಿಗೆ ತಪ್ಪದೇ ಒಪ್ಪಿಸತಕ್ಕದ್ದು.
7. ಪರೀಕ್ಷಾ ಕೊಠಡಿಯೊಳಗೆ, ಕ್ಯಾಲ್ಕ್ಯುಲೇಟರ್, ಮೊಬೈಲ್ ದೂರವಾಣಿಯನ್ನು (ಇನ್ನಾವುದೇ ಎಲೆಕ್ಟ್ರಾನಿಕ್ ಉಪಕರಣಗಳನ್ನು) ತರುವುದನ್ನು ನಿಷೇಧಿಸಿದೆ.
8. ಅನುವಾದಿತ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ಸಮಸ್ಯೆಗಳು ಉದ್ಭವಿಸಿದಲ್ಲಿ ಪ್ರಶ್ನೆ ಪತ್ರಿಕೆಯ ಇಂಗ್ಲಿಷ್ ರೂಪಾಂತರವೇ ಅಂತಿಮವೆಂದು ತಿಳಿಯಬೇಕು.
9. ಯಾವುದೇ ಭಿನ್ನಾಭಿಪ್ರಾಯಗಳು ಇದ್ದಲ್ಲಿ DSERT ಯಿಂದ ನೇಮಿಸಲ್ಪಟ್ಟ ತಜ್ಞರ ಅಭಿಪ್ರಾಯವೇ ಅಂತಿಮ.

***Note :*** *English version of the instructions is printed on the back cover of this booklet.*

# ವ್ಯಾಸಂಗಿಕ ಪ್ರವೃತ್ತಿ ಪರೀಕ್ಷೆ
# SCHOLASTIC APTITUDE TEST

## ವಿಷಯಸೂಚಿ/CONTENTS


| SL.NO. ಕ್ರ.ಸಂ. | SUBJECT ವಿಷಯ | | QUESTION NO. FROM ಪ್ರಶ್ನೆ ಸಂಖ್ಯೆ ಇಂದ | TO ಗೆ | PAGE ಪುಟ |
|---|---|---|---|---|---|
| 01. | PHYSICS<br>ಭೌತಶಾಸ್ತ್ರ | ....... | 1 | 12 | 3-5 |
| 02. | CHEMISTRY<br>ರಸಾಯನಶಾಸ್ತ್ರ | ....... | 13 | 23 | 6-8 |
| 03. | BIOLOGY<br>ಜೀವಶಾಸ್ತ್ರ | ....... | 24 | 35 | 9-12 |
| 04. | HISTORY<br>ಇತಿಹಾಸ | ....... | 36 | 45 | 13-15 |
| 05. | GEOGRAPHY AND ECONOMICS<br>ಭೂಗೋಳಶಾಸ್ತ್ರ ಮತ್ತು ಅರ್ಥಶಾಸ್ತ್ರ | ....... | 46 | 60 | 16-20 |
| 06. | POLITICAL SCIENCE AND SOCIOLOGY<br>ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ | ....... | 61 | 70 | 21-23 |
| 07. | MATHEMATICS<br>ಗಣಿತ | ....... | 71 | 90 | 24-29 |

## PHYSICS

**1. A body travels from ‘A’ to ‘B’ at 40 $ms^{-1}$ and from ‘B’ to ‘A’ at 60 $ms^{-1}$. Then its average velocity is**

1) 50 $ms^{1}$
2) 48 $ms^{1}$
3) 0 $ms^{1}$
4) – 2 $ms^{1}$

**2. If the velocity of a body starts to decrease then the body is in**

1) retardation
2) acceleration
3) displacement
4) speed

**3. Calculate the Kinetic energy of a bullet of mass 2.2 gm moving with a velocity 500 $ms^{-1}$.**

1) 0.275 J
2) 2.750 J
3) 27.50 J
4) 275.0 J

**4. A body does a work ‘80 J’ in ‘4’ seconds, then the power of the body is**

1) 10 W
2) 20 W
3) 30 W
4) 40 W

## ಭೌತಶಾಸ್ತ್ರ

**1.** ಒಂದು ಕಾಯವು **‘A’** ಯಿಂದ **‘B’** ಗೆ **40 $ms^{-1}$** ಮತ್ತು **‘B’** ಯಿಂದ **‘A’** ಗೆ **60 $ms^{-1}$** ದಲ್ಲಿ ಚಲಿಸುತ್ತದೆ. ಹಾಗಾದರೆ ಅದರ ಸರಾಸರಿ ವೇಗವು

1) 50 $ms^{1}$
2) 48 $ms^{1}$
3) 0 $ms^{1}$
4) – 2 $ms^{1}$

**2.** ಒಂದು ಕಾಯದ ವೇಗವು ಕ್ಷೀಣಿಸುತ್ತಿರುವಾಗ ಆ ಕಾಯದಲ್ಲಿರುವುದು

1) ಋಣ ವೇಗೋತ್ಕರ್ಷ
2) ವೇಗೋತ್ಕರ್ಷ
3) ಸ್ಥಾನಪಲ್ಲಟ
4) ಜವ

**3. 2.2 gm** ದ್ರವ್ಯರಾಶಿಯುಳ್ಳ ಒಂದು ಗುಂಡು **500 $ms^{-1}$** ವೇಗದೊಂದಿಗೆ ಚಲಿಸುತ್ತಿದ್ದರೆ ಅದರ ಚಲನಶಕ್ತಿಯನ್ನು ಲೆಕ್ಕಚಾರ ಮಾಡಿ.

1) 0.275 J
2) 2.750 J
3) 27.50 J
4) 275.0 J

**4.** ಒಂದು ಕಾಯವು **‘4’** ಸೆಕೆಂಡ್‌ಗಳಲ್ಲಿ **‘80 J’** ಕೆಲಸವನ್ನು ಮಾಡಿದರೆ ಆ ಕಾಯದ ಸಾಮರ್ಥ್ಯವು

1) 10 W
2) 20 W
3) 30 W
4) 40 W

**5. Which of the following waves give series of compression and rarefaction in a medium ?**

1) Light waves
2) Sound waves
3) Radio waves
4) Electromagnetic waves


**6. Colour of light having minimum angle of deviation is**

1) Violet  2) Yellow
3) Red  4) Blue

**7. When light travels from vacuum to water, which of the following characteristics of light will remain unchanged ?**

1) Velocity  2) Amplitude
3) Frequency  4) Wavelength

**8. In the figure, an object is kept between 'C' and 'F', then image of the object is formed**




1) in front of 'F'
2) at 'F'
3) at 'C'
4) beyond 'C'

**5. ಕೆಳಗಿನ ಯಾವ ಅಲೆಗಳು ಒಂದು ಮಾಧ್ಯಮದಲ್ಲಿ ಸಾಂದ್ರೀಕರಣ ಮತ್ತು ವಿರಳನಗಳ ಸರಣಿಯನ್ನು ನೀಡುತ್ತವೆ ?**

1) ಬೆಳಕಿನ ಅಲೆಗಳು
2) ಶಬ್ದದ ಅಲೆಗಳು
3) ರೇಡಿಯೋ ಅಲೆಗಳು
4) ವಿದ್ಯುತ್ಕಾಂತೀಯ ಅಲೆಗಳು


**6. ಅಲ್ಪ ಕೋನಿಯ ಬಾಗುವಿಕೆಯನ್ನು ಹೊಂದಿರುವ ಬೆಳಕಿನ ಬಣ್ಣವು**

1) ನೇರಳೆ  2) ಹಳದಿ
3) ಕೆಂಪು  4) ನೀಲಿ

**7. ಬೆಳಕು ನಿರ್ವಾತದಿಂದ ನೀರಿಗೆ ಪ್ರಯಾಣಿಸಿದಾಗ, ಈ ಕೆಳಕಂಡವುಗಳಲ್ಲಿ ಬೆಳಕಿನ ಯಾವ ಗುಣಲಕ್ಷಣವು ವ್ಯತ್ಯಾಸಗೊಳ್ಳುವುದಿಲ್ಲ ?**


1) ವೇಗ  2) ಕಂಪನ ವಿಸ್ತಾರ
3) ಆವೃತ್ತಿ  4) ತರಂಗ ದೂರ

**8. ಕೊಟ್ಟಿರುವ ಚಿತ್ರದಲ್ಲಿ ಒಂದು ವಸ್ತುವನ್ನು 'C' ಮತ್ತು 'F' ಗಳ ನಡುವೆ ಇಡಲಾಗಿದೆ. ಈ ವಸ್ತುವಿನ ಪ್ರತಿಬಿಂಬವು**




1) **'F'** ನ ಮುಂದೆ ಉಂಟಾಗುತ್ತದೆ
2) **'F'** ನಲ್ಲಿ ಉಂಟಾಗುತ್ತದೆ
3) **'C'** ನಲ್ಲಿ ಉಂಟಾಗುತ್ತದೆ
4) **'C'** ನಿಂದ ಆಚೆ ಉಂಟಾಗುತ್ತದೆ

**9. In the figure, the distance between points 'A' and 'C' is**




1)
2) 2
3) 3
4) 4

**10. Television Stations use**

1) high frequency waves only
2) low frequency waves only
3) both high and low frequency waves
4) neither high nor low frequency waves


**11. Photocell converts light energy into**

1) chemical energy
2) mechanical energy
3) thermal energy
4) electrical energy

**12. Expansion of the word SIM is**

1) Subscriber Index Module
2) Subscriber Input Module
3) Subscriber International Module
4) Subscriber Include Module

**9. ಕೊಟ್ಟಿರುವ ಚಿತ್ರದಲ್ಲಿ 'A' ಮತ್ತು 'C' ಬಿಂದುಗಳ ನಡುವಿನ ದೂರ**




1)
2) 2
3) 3
4) 4

**10. ದೂರದರ್ಶನ ಕೇಂದ್ರಗಳು ಬಳಸುವುದು**

1) ಹೆಚ್ಚು ಆವೃತ್ತಿಯ ತರಂಗಗಳನ್ನು ಮಾತ್ರ
2) ಕಡಿಮೆ ಆವೃತ್ತಿಯ ತರಂಗಗಳನ್ನು ಮಾತ್ರ
3) ಹೆಚ್ಚು ಮತ್ತು ಕಡಿಮೆ ಆವೃತ್ತಿಯ ತರಂಗಗಳೆರಡನ್ನೂ
4) ಹೆಚ್ಚು ಮತ್ತು ಕಡಿಮೆ ಆವೃತ್ತಿಯ ತರಂಗಗಳೆರಡನ್ನೂ ಅಲ್ಲ

**11. ದ್ಯುತಿಕೋಶವು ಬೆಳಕಿನ ಶಕ್ತಿಯನ್ನು ಈ ಶಕ್ತಿಯನ್ನಾಗಿ ಪರಿವರ್ತಿಸುತ್ತದೆ.**

1) ರಾಸಾಯನಿಕ ಶಕ್ತಿ
2) ಯಾಂತ್ರಿಕ ಶಕ್ತಿ
3) ಉಷ್ಣ ಶಕ್ತಿ
4) ವಿದ್ಯುತ್ ಶಕ್ತಿ

**12. SIM ಪದದ ವಿಸ್ತರಣಾ ರೂಪವು**

1) Subscriber Index Module
2) Subscriber Input Module
3) Subscriber International Module
4) Subscriber Include Module

## CHEMISTRY

**13. This is the first milestone in explaining the inner structure of matter is**

1) Dalton's theory
2) J.J. Thomson's experiment
3) Bohr's experiment
4) Rutherford's experiment

**14. The deflection of anode rays in an electric field when compared to cathode rays is**

1) little
2) very little
3) more
4) large

**15. Heavier the gas in the discharge tube**

1) more the deflection
2) lower the deflection
3) no deflection
4) larger the deflection

## ರಸಾಯನಶಾಸ್ತ್ರ

**13. ದ್ರವ್ಯಗಳ ಸಂರಚನೆಯನ್ನು ಅರಿಯುವಲ್ಲಿ ಇದು ಪ್ರಥಮ ಮೈಲಿಗಲ್ಲಾಗಿದೆ**

1) ಡಾಲ್ಟನ್‌ನ ಸಿದ್ಧಾಂತ
2) ಜೆ.ಜೆ. ಥಾಮ್ಸನ್ ಪ್ರಯೋಗ
3) ಬೋರ್ ಪ್ರಯೋಗ
4) ರುದರ್‌ಫೋರ್ಡ್ ಪ್ರಯೋಗ

**14. ವಿದ್ಯುತ್ ಕ್ಷೇತ್ರದಲ್ಲಿ ಇಲೆಕ್ಟ್ರಾನುಗಳಿಗೆ ಹೋಲಿಸಿದರೆ ಧನಾಗ್ರ ಕಿರಣಗಳ ವಿಚಲನೆ**

1) ಕಡಿಮೆ
2) ತುಂಬಾ ಕಡಿಮೆ
3) ಹೆಚ್ಚು
4) ತುಂಬಾ ಹೆಚ್ಚು

**15. ವಿಸರ್ಜನಾ ನಳಿಕೆಯುಲ್ಲಿ ಅನಿಲದ ರಾಶಿ ಹೆಚ್ಚಿದಷ್ಟೂ**

1) ವಿಚಲನೆ ಹೆಚ್ಚಿರುತ್ತದೆ
2) ವಿಚಲನೆ ಕಡಿಮೆ ಇರುತ್ತದೆ
3) ವಿಚಲನೆ ಇರುವುದಿಲ್ಲ
4) ವಿಚಲನೆ ತುಂಬಾ ಇರುತ್ತದೆ

**16. In a neutral atom**

1) The number of electrons outside nucleus is equal to number of positively charged particles in the nucleus
2) The number of electrons outside nucleus is not equal to number of positively charged particles in the nucleus
3) The number of electrons outside nucleus is equal to number of neutral particles in the nucleus
4) The number of electrons outside nucleus is equal to sum of neutral particles and positively charged particles in the nucleus

**17. The statement which represent the postulate of Bohr model is**

1) Electrons in each shell have been associated with definite amount of energy
2) The energy of an electron does not remain constant as long as it revolves in its own shell
3) An atom is indivisible
4) An atom can neither be created nor be destroyed

**18. The Relative molecular mass of HCl is**

1) 35.45 2) 53.45
3) 36.46 4) 53.54

**16. ವಿದ್ಯುತ್ ತಟಸ್ಥ ಪರಮಾಣುವಿನಲ್ಲಿ :**

1) ಬೀಜಕೇಂದ್ರದ ಹೊರಗಿನ ಇಲೆಕ್ಟ್ರಾನುಗಳ ಸಂಖ್ಯೆಯು ಬೀಜಕೇಂದ್ರದ ಒಳಗಿನ ಧನ ವಿದ್ಯುದಂಶದ ಕಣಗಳಿಗೆ ಸಮವಾಗಿರುತ್ತದೆ
2) ಬೀಜಕೇಂದ್ರದ ಹೊರಗಿನ ಇಲೆಕ್ಟ್ರಾನುಗಳ ಸಂಖ್ಯೆಯು ಬೀಜಕೇಂದ್ರದ ಒಳಗಿನ ಧನ ವಿದ್ಯುದಂಶದ ಕಣಗಳಿಗೆ ಸಮನಾಗಿರುವುದಿಲ್ಲ
3) ಬೀಜಕೇಂದ್ರದ ಹೊರಗಿನ ಇಲೆಕ್ಟ್ರಾನುಗಳ ಸಂಖ್ಯೆಯು ಬೀಜಕೇಂದ್ರದ ಒಳಗಿನ ನ್ಯೂಟ್ರಾನ್ ಕಣಗಳಿಗೆ ಸಮನಾಗಿರುತ್ತದೆ
4) ಬೀಜಕೇಂದ್ರದ ಹೊರಗಿನ ಇಲೆಕ್ಟ್ರಾನುಗಳ ಸಂಖ್ಯೆಯು ಬೀಜಕೇಂದ್ರದ ಒಳಗಿನ ಒಟ್ಟು ನ್ಯೂಟ್ರಾನ್ ಕಣಗಳಿಗೆ ಮತ್ತು ಧನ ವಿದ್ಯುದಂಶದ ಕಣಗಳಿಗೆ ಸಮನಾಗಿರುತ್ತವೆ

**17. ಬೋರ್ ಮಾದರಿಯ ಆಧಾರ ಭಾವನೆಯನ್ನು ಈ ಹೇಳಿಕೆಯು ಪ್ರತಿನಿಧಿಸುತ್ತದೆ :**

1) ಪ್ರತಿಯೊಂದು ಕಕ್ಷೆಯಲ್ಲಿರುವ ಇಲೆಕ್ಟ್ರಾನ್ ಒಂದು ನಿರ್ದಿಷ್ಟ ಪರಿಮಾಣದ ಶಕ್ತಿಯನ್ನು ಹೊಂದಿರುತ್ತದೆ
2) ಇಲೆಕ್ಟ್ರಾನ್ ತನ್ನ ಕಕ್ಷೆಯಲ್ಲಿ ಸುತ್ತುತ್ತಿರುವವರೆಗೆ, ಇಲೆಕ್ಟ್ರಾನ್ ಶಕ್ತಿ ಸ್ಥಿರವಾಗಿರುವುದಿಲ್ಲ
3) ಪರಮಾಣುವನ್ನು ವಿಭಜಿಸಲು ಸಾಧ್ಯವಿಲ್ಲ
4) ಪರಮಾಣುವನ್ನು ಸೃಷ್ಟಿಸಲೂ ಸಾಧ್ಯವಿಲ್ಲ ಹಾಗೂ ನಾಶಪಡಿಸಲೂ ಸಾಧ್ಯವಿಲ್ಲ

**18. HCl ನ ಸಾಪೇಕ್ಷ ಅಣು ರಾಶಿಯು**

1) 35.45 2) 53.45
3) 36.46 4) 53.54

**19. Gram molecular mass of $CCl_4$ is :**

1) 150.0
2) 154.0
3) 151.0
4) 155.0

**20. Identify unbalanced chemical equation in the following :**

1) $KNO_3 \rightarrow KNO_2 + O_2$
2) $PCl_3 + 3H_2O \rightarrow H_3PO_3 + 3HCl$
3) $CaC_2 + 2H_2O \rightarrow Ca(OH)_2 + C_2H_2$
4) $2C_2H_2 + 5O_2 \rightarrow 4CO_2 + 2H_2O$

**21. The example for chemical displacement is**

1) $8Fe + S_8 \rightarrow 8FeS$
2) $Zn + 2HCl \rightarrow ZnCl_2 + H_2$
3) $NaCl + AgNO_3 \rightarrow NaNO_3 + AgCl$
4) $2H_2O \rightarrow 2H_2 + O_2$

**22. The gas liberated when concentrated HCl is added to manganese dioxide and heated**

1) Oxygen
2) Nitrogen
3) Hydrogen
4) Chlorine

**23. The following set of elements are arranged in the decreasing order of their reactivity :**

1) Na, K, C, Cu
2) Na, K, Cu, C
3) K, Na, C, Cu
4) K, Na, Cu, C

**19. $CCl_4$ನ ಗ್ರಾಂ ಪರಮಾಣು ರಾಶಿಯು**

1) 150.0
2) 154.0
3) 151.0
4) 155.0

**20. ಈ ಕೆಳಗಿನವುಗಳಲ್ಲಿ ಸಮದೂಗಿಸಿದಲ್ಲದ ಸಮೀಕರಣವನ್ನು ಗುರುತಿಸಿ.**

1) $KNO_3 \rightarrow KNO_2 + O_2$
2) $PCl_3 + 3H_2O \rightarrow H_3PO_3 + 3HCl$
3) $CaC_2 + 2H_2O \rightarrow Ca(OH)_2 + C_2H_2$
4) $2C_2H_2 + 5O_2 \rightarrow 4CO_2 + 2H_2O$

**21. ರಾಸಾಯನಿಕ ಸ್ಥಾನಪಲ್ಲಟಕ್ಕೆ ಇದು ಉದಾಹರಣೆ**

1) $8Fe + S_8 \rightarrow 8FeS$
2) $Zn + 2HCl \rightarrow ZnCl_2 + H_2$
3) $NaCl + AgNO_3 \rightarrow NaNO_3 + AgCl$
4) $2H_2O \rightarrow 2H_2 + O_2$

**22. ಮ್ಯಾಂಗನೀಸ್ ಡೈ ಆಕ್ಸೈಡ್‌ಗೆ ಸಾರಯುತ ಹೈಡ್ರೋಕ್ಲೋರಿಕ್ ಆಮ್ಲವನ್ನು ಸೇರಿಸಿದಾಗ ಬಿಡುಗಡೆಯಾಗುವ ಅನಿಲ**

1) ಆಮ್ಲಜನಕ
2) ಸಾರಜನಕ
3) ಜಲಜನಕ
4) ಕ್ಲೋರಿನ್

**23. ಈ ಕೆಳಗಿನ ಗುಂಪು ಧಾತುಗಳನ್ನು ಕ್ರಿಯಾಪಟು ಆಧಾರದ ಇಳಿಕೆ ಕ್ರಮದಲ್ಲಿ ಜೋಡಿಸಲಾಗಿದೆ.**

1) Na, K, C, Cu
2) Na, K, Cu, C
3) K, Na, C, Cu
4) K, Na, Cu, C

## BIOLOGY

**24. In the primitive earth there was no existence of life because Atmosphere**

1) was reducing type
2) was oxidizing type
3) contain molecular oxygen
4) was cool

**25. Beta carotene and Folic acid are called provitamins because they**

1) Facilitate biochemical reactions in our body
2) Keep the bowel movement smooth
3) Get converted into vitamins
4) Facilitate the proper functioning of prostrate gland

**26. Haldane called sea water a 'hot dilute soup' because it consists of**

1) complex organic molecules
2) simpler organic molecules
3) complex inorganic molecules
4) simpler inorganic molecules

## ಜೀವಶಾಸ್ತ್ರ

**24. ಪ್ರಾಚೀನ ಭೂಮಿಯಲ್ಲಿ ಜೀವಿಗಳ ಉಗಮ ಸಾಧ್ಯವಾಗದಿರಲು ಕಾರಣ ವಾತಾವರಣವು**

1) ಅಪಕರ್ಷಕ ರೀತಿಯಾಗಿತ್ತು
2) ಉತ್ಕರ್ಷಕ ರೀತಿಯಾಗಿತ್ತು
3) ಆಕ್ಸಿಜನ್ ಅಣುವನ್ನು ಹೊಂದಿತ್ತು
4) ತಂಪಾಗಿತ್ತು

**25. ಬೀಟಾ ಕ್ಯಾರೋಟೀನ್ ಮತ್ತು ಫೋಲಿಕ್ ಆಮ್ಲವನ್ನು ಪ್ರೋವಿಟಮಿನ್‌ಗಳು ಎನ್ನಲು ಕಾರಣ ಇವು**

1) ದೇಹದೊಳಗೆ ಹಲವಾರು ಜೀವ ರಾಸಾಯನಿಕ ಕ್ರಿಯೆಗಳಲ್ಲಿ ಪಾಲ್ಗೊಳ್ಳುತ್ತವೆ.
2) ಆಹಾರ ನಾಳದಲ್ಲಿ ಆಹಾರ ಪದಾರ್ಥಗಳು ಸುಲಭವಾಗಿ ಚಲಿಸಲು ನೆರವಾಗುತ್ತದೆ.
3) ದೇಹದಲ್ಲಿ ನಿರ್ದಿಷ್ಟ ವಿಟಮಿನ್‌ಗಳಾಗಿ ಪರಿವರ್ತನೆಯಾಗುತ್ತದೆ.
4) ಪ್ರಾಸ್ಟೇಟ್ ಗ್ರಂಥಿಯ ಕೆಲಸವನ್ನು ನಿಯಂತ್ರಿಸುತ್ತದೆ.

**26. ಹಾಲ್ಡೇನ್ ಎಂಬ ವಿಜ್ಞಾನಿ ಸಮುದ್ರಗಳ ನೀರನ್ನು "ತೆಳುವಾದ ಸೂಪ್" ಎನ್ನಲು ಕಾರಣ ಅವು**

1) ಸಂಕೀರ್ಣ ಸಾವಯವ ಸಂಯುಕ್ತಗಳನ್ನು ಒಳಗೊಂಡಿದೆ.
2) ಸರಳ ಸಾವಯವ ಸಂಯುಕ್ತಗಳನ್ನು ಒಳಗೊಂಡಿದೆ.
3) ಸಂಕೀರ್ಣ ನಿರವಯವ ಸಂಯುಕ್ತಗಳನ್ನು ಒಳಗೊಂಡಿದೆ.
4) ಸರಳ ನಿರವಯವ ಸಂಯುಕ್ತಗಳನ್ನು ಒಳಗೊಂಡಿದೆ.

**27. The union of male gamete and Female gamete in the flower takes place in**

1) pollen tube
2) embryo sac
3) ovary
4) stigma

**28. The digestive juice that does not contain any enzyme is**

1) Salivary juice
2) Pancreatic juice
3) Intestinal juice
4) Bile juice

**29. Since man's Fore limbs are shorter than hind limbs they are include under**

1) class mammalia
2) order primates
3) family hominidae
4) phylum chordata

**27. ಹೂವಿನ ಈ ಭಾಗದಲ್ಲಿ ಪುರುಷ ಮತ್ತು ಸ್ತ್ರೀ ಲಿಂಗಾಣುಗಳ ಸಂಯೋಗ ಉಂಟಾಗುತ್ತದೆ :**

1) ಪರಾಗನಳಿಕೆ
2) ಭ್ರೂಣಸಂಚಿ
3) ಅಂಡಾಶಯ
4) ಶಲಾಕಾಗ್ರ

**28. ಯಾವುದೇ ಕಿಣ್ವವನ್ನು ಹೊಂದಿರದ ಜೀರ್ಣರಸ**

1) ಲಾಲರಸ
2) ಮೇದೋಜೀರಕರಸ
3) ಕರುಳಿನರಸ
4) ಪಿತ್ತರಸ

**29. ಮಾನವನ ಮುಂಗಾಲುಗಳು ಹಿಂಗಾಲುಗಳಿಗಿಂತ ಚಿಕ್ಕದಾಗಿರುವುದರಿಂದ ಅವುಗಳನ್ನು ಇಲ್ಲಿಗೆ ಸೇರಿಸಲಾಗಿದೆ :**

1) ಸ್ತನಿಗಳ ವರ್ಗಕ್ಕೆ
2) ಪ್ರೈಮೇಟ್ ಗಣಕ್ಕೆ
3) ಹೋಮಿನಿಡೆ ಕುಟುಂಬಕ್ಕೆ
4) ಕಾರ್ಡೇಟಾ ವಂಶಕ್ಕೆ

**30. The pigment present in the part of the plant that are not exposed to sun light is**

1) carotene
2) chloroplast
3) chromoplast
4) leucoplast

**31. The following statement is true regarding Bacteria**

1) The genetic material is RNA
2) The locomotory organ is pseudopodia
3) Genetic material is not enclosed by a nuclear membrane
4) They do not have cell wall

**32. If the producer has 10,000 units of energy, then tertiary consumer gets**

1) 1000 units of energy
2) 100 units of energy
3) 10 units of energy
4) 1 unit of energy

**30. ಬೆಳಕು ಬೀಳದ ಸಸ್ಯದ ಭಾಗಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ವರ್ಣಕ**

1) ಕ್ಯಾರೋಟೀನ್
2) ಕ್ಲೋರೋಪ್ಲಾಸ್ಟ್
3) ಕ್ರೋಮೋಪ್ಲಾಸ್ಟ್
4) ಲ್ಯೂಕೋಪ್ಲಾಸ್ಟ್

**31. ಬ್ಯಾಕ್ಟೀರಿಯಾಕ್ಕೆ ಸಂಬಂಧಪಟ್ಟಂತೆ ಈ ಕೆಳಗಿನ ಹೇಳಿಕೆ ನಿಜವಾಗಿದೆ. ಅವುಗಳ**

1) ಅನುವಂಶೀಯ ವಸ್ತು RNA
2) ಚಲನಾಂಗ ಮಿಥ್ಯಪಾದ
3) ಅನುವಂಶೀಯ ವಸ್ತು ಕೋಶಬೀಜ ಪೊರೆಯಿಂದ ಆವೃತವಾಗಿಲ್ಲ
4) ಜೀವಕೋಶದಲ್ಲಿ ಕೋಶಭಿತ್ತಿ ಇರುವುದಿಲ್ಲ

**32. ಉತ್ಪಾದಕ ಸಸ್ಯವೊಂದರಲ್ಲಿ 10,000 ಘಟಕಗಳಷ್ಟು ಆಹಾರ ಶಕ್ತಿ ಇದ್ದರೆ, ತೃತೀಯಕ ಭಕ್ಷಕಕ್ಕೆ ದೊರಕುವ ಶಕ್ತಿಯ ಪ್ರಮಾಣ**

1) 1000 ಘಟಕಗಳಷ್ಟು ಶಕ್ತಿ
2) 100 ಘಟಕಗಳಷ್ಟು ಶಕ್ತಿ
3) 10 ಘಟಕಗಳಷ್ಟು ಶಕ್ತಿ
4) 1 ಘಟಕದಷ್ಟು ಶಕ್ತಿ

**33. The first forms of life developed in the oxygen free atmosphere, they obtained energy by**

1) Oxidation of organic compounds
2) Decomposition of organic compounds
3) Fermentation of organic compounds
4) Synthesis of organic compounds

**34. In a compound microscope if magnification of eye piece lens is 20 X and objective lens is 50 X. The object appears**

1) 100 times larger than its actual size
2) 1,000 times larger than its actual size
3) 10,000 times larger than its actual size
4) 1,00,000 times larger than its actual size

**35. The correct matching of Bacteria and their shape**

| | |
|---|---|
| A. Bacillus | 1. Comma |
| B. Cocci | 2. Spiral |
| C. Vibrio | 3. Spherical |
| D. Spirilli | 4. Rod |

1) A – 3 B – 2 C – 1 D – 4
2) A – 4 B – 3 C – 1 D – 2
3) A – 1 B – 4 C – 3 D – 2
4) A – 2 B – 1 C – 4 D – 3

**33. ಪ್ರಾರಂಭದಲ್ಲಿ ಕಂಡು ಬಂದ ಜೀವದ ರಚನೆಗಳು ಉಂಟಾಗಿದ್ದು ಆಕ್ಸಿಜನ್ ಮುಕ್ತ ವಾತಾವರಣದಲ್ಲಿ, ಇವುಗಳು ಶಕ್ತಿಯನ್ನು ಪಡೆಯುತ್ತಿದ್ದದ್ದು**

1) ಸಾವಯವ ವಸ್ತುಗಳ ಉತ್ಕರ್ಷಣದಿಂದ
2) ಸಾವಯವ ವಸ್ತುಗಳ ವಿಘಟನೆಯಿಂದ
3) ಸಾವಯವ ವಸ್ತುಗಳ ಹುದುಗುವಿಕೆಯಿಂದ
4) ಸಾವಯವ ವಸ್ತುಗಳ ಸಂಶ್ಲೇಷಣೆಯಿಂದ

**34. ಒಂದು ಸಂಯುಕ್ತ ಸೂಕ್ಷ್ಮದರ್ಶಕದ ನೇತ್ರಕದ ಸಾಮರ್ಥ್ಯ 20 X ಇದ್ದು ವಸ್ತುಕದ ಸಾಮರ್ಥ್ಯ 50 X. ಆದರೆ ವಸ್ತುವಿನ ಗಾತ್ರ**

1) ಮೂಲಗಾತ್ರಕ್ಕಿಂತ 100 ಪಟ್ಟು ದೊಡ್ಡದಾಗಿ ಕಾಣುವುದು
2) ಮೂಲಗಾತ್ರಕ್ಕಿಂತ 1,000 ಪಟ್ಟು ದೊಡ್ಡದಾಗಿ ಕಾಣುವುದು
3) ಮೂಲಗಾತ್ರಕ್ಕಿಂತ 10,000 ಪಟ್ಟು ದೊಡ್ಡದಾಗಿ ಕಾಣುವುದು
4) ಮೂಲಗಾತ್ರಕ್ಕಿಂತ 1,00,000 ಪಟ್ಟು ದೊಡ್ಡದಾಗಿ ಕಾಣುವುದು

**35. ಬ್ಯಾಕ್ಟೀರಿಯಾಗಳು ಮತ್ತು ಅವುಗಳ ಆಕಾರಗಳ ಸರಿಯಾದ ಹೊಂದಾಣಿಕೆ**

| | |
|---|---|
| A. ಬ್ಯಾಸಿಲಸ್ | 1. ಅರ್ಧಚಂದ್ರಾಕೃತಿ |
| B. ಕಾಕೈ | 2. ಸುರುಳಿ |
| C. ವಿಬ್ರಿಯೋ | 3. ದುಂಡಕಾರ |
| D. ಸ್ಪಿರಿಲ್ಲೈ | 4. ದಂಡಾಕಾರ |

1) A – 3 B – 2 C – 1 D – 4
2) A – 4 B – 3 C – 1 D – 2
3) A – 1 B – 4 C – 3 D – 2
4) A – 2 B – 1 C – 4 D – 3

## HISTORY

**36. The call 'Back to the Vedas' was associated with the social reformer :**

1) Dayananda Saraswati
2) Rajaram Mohan Roy
3) Atmarama Panduranga
4) Jyothiba Phule

**37. The chronological order of the following events :**

a. Establishment of All India Muslim League
b. Jallian Walabagh Massacre
c. Founding of Indian National Congress
d. Division of Bengal

1) d, c, b, a  2) d, c, a, b
3) c, d, a, b  4) b, d, a, c

**38. Examine the following statements and select the correct option :**

A) The dead body preserved by Egyptians was called 'Mummy'.
B) Generally all civilizations originated in river valleys.

1) A is true, B is false
2) Both A and B are true
3) A is false, B is true
4) Both A and B are false

## ಇತಿಹಾಸ

**36. 'ವೇದಗಳಿಗೆ ಹಿಂದಿರುಗಿ' ಎಂಬ ಹೇಳಿಕೆಗೆ ಸರಿ ಹೊಂದಿಸಬಹುದಾದ ಸಮಾಜ ಸುಧಾರಕರು :**

1) ದಯಾನಂದ ಸರಸ್ವತಿ
2) ರಾಜಾರಾಂ ಮೋಹನರಾಯ್
3) ಆತ್ಮರಾಮ ಪಾಂಡುರಂಗ
4) ಜ್ಯೋತಿಬಾ ಫುಲೆ

**37. ಈ ಕೆಳಗಿನ ಘಟನೆಗಳ ಸರಿಯಾದ ಕಾಲಾನುಕ್ರಮ:**

a. ಆಲ್ ಇಂಡಿಯಾ ಮುಸ್ಲಿಂ ಲೀಗ್ ಸ್ಥಾಪನೆ
b. ಜಲಿಯನ್ ವಾಲಾಬಾಗ್ ಹತ್ಯಾಕಾಂಡ
c. ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ
d. ಬಂಗಾಳದ ವಿಭಜನೆ

1) d, c, b, a  2) d, c, a, b
3) c, d, a, b  4) b, d, a, c

**38. ಈ ಕೆಳಗಿನ ಎರಡು ವಾಕ್ಯಗಳಿಗೆ ಸರಿ ಹೊಂದುವ ಆಯ್ಕೆ :**

A) ಈಜಿಪ್ಟಿಯನ್ನರು ಸಂರಕ್ಷಿಸುತ್ತಿದ್ದ ಸತ್ತ ದೇಹಗಳನ್ನು 'ಮಮ್ಮಿ' ಎಂದು ಕರೆಯುತ್ತಿದ್ದರು.
B) ಸಾಮಾನ್ಯವಾಗಿ ಎಲ್ಲಾ ಪ್ರಾಚೀನ ನಾಗರೀಕತೆಗಳು ನದಿ ಬಯಲು ಪ್ರದೇಶದಲ್ಲಿ ಹುಟ್ಟಿಕೊಂಡಿವೆ.

1) ವಾಕ್ಯ A ಸರಿ, B ತಪ್ಪು
2) ವಾಕ್ಯ A ಮತ್ತು B ಎರಡೂ ಸರಿ
3) ವಾಕ್ಯ A ತಪ್ಪು, B ಸರಿ
4) ವಾಕ್ಯ A ಮತ್ತು B ಎರಡೂ ತಪ್ಪು

**39. The ancient part of the Vedas is :**

1) Atharvana Veda
2) Yajur Veda
3) Sama Veda
4) Rig Veda

**40. Western Coast : Malbar Coast : : Eastern Coast : _______**

1) Konkan Coast
2) Kutch Coast
3) Canara Coast
4) Coramandel Coast

**41. Capitals of the following dynasties in their correct order are :**

A. Shatavahanas
B. kadambas
C. Gangas
D. Chalukyas

1) Srikakulam, Banavasi, Talakadu, Badami
2) Badami, Banavasi, Talakadu, Srikakulam
3) Banavasi, Srikakulam, Badami, Talakadu
4) Talakadu, Banavasi, Srikakulam, Badami

**39. ವೇದಗಳಲ್ಲಿ ಅತ್ಯಂತ ಪುರಾತನವಾದದ್ದು :**

1) ಅಥರ್ವಣ ವೇದ
2) ಯಜುರ್ವೇದ
3) ಸಾಮವೇದ
4) ಋಗ್ವೇದ

**40. ಪಶ್ಚಿಮ ಕರಾವಳಿ : ಮಲಬಾರ್ ತೀರ :: ಪೂರ್ವ ಕರಾವಳಿ :**

1) ಕೊಂಕಣ ತೀರ
2) ಕಚ್ ತೀರ
3) ಕೆನರಾ ತೀರ
4) ಕೋರಮಂಡಲ ತೀರ

**41. ಕೆಳಕಂಡ ರಾಜವಂಶಗಳ ರಾಜಧಾನಿಯ ಸರಿಯಾದ ಕ್ರಮ :**

A. ಶಾತವಾಹನರು
B. ಕದಂಬರು
C. ಗಂಗರು
D. ಚಾಲುಕ್ಯರು

1) ಶ್ರೀಕಾಕುಲಂ, ಬನವಾಸಿ, ತಲಕಾಡು, ಬಾದಾಮಿ
2) ಬಾದಾಮಿ, ಬನವಾಸಿ, ತಲಕಾಡು, ಶ್ರೀಕಾಕುಲಂ
3) ಬನವಾಸಿ, ಶ್ರೀಕಾಕುಲಂ, ಬಾದಾಮಿ, ತಲಕಾಡು
4) ತಲಕಾಡು, ಬನವಾಸಿ, ಶ್ರೀಕಾಕುಲಂ, ಬಾದಾಮಿ

**42. The thought "Knowledge is virtue, virtue is knowledge" is associated with :**

1) Plato
2) Socrates
3) Aristotle
4) Phedes

**43. The immediate cause for the first war of Indian Independence, 1857 was :**

1) Cartridges smeared with fat
2) The rule of law introduced by the English
3) End of traditional industries
4) Low salaries for Indian soldiers

**44. Identify the mismatched item :**

A. St. Peter's Church at Rome – Architecture
B. Last Supper – Painting
C. Pieta – Sculpture
D. Moses – Painting

1) A  2) B
3) C  4) D

**45. Mrichchikatika : Sudraka : : Mattavilasa Prahasana :**

1) Narasimhavarman
2) Mahendravarman
3) Pulakesi - I
4) Keertivarman

**42. "ಜ್ಞಾನವೇ ಗುಣ, ಗುಣವೇ ಜ್ಞಾನ" ಎಂಬ ತತ್ವ ಚಿಂತನೆಗೆ ಸಂಬಂಧಿಸಿದವರು :**

1) ಪ್ಲೇಟೋ
2) ಸಾಕ್ರೆಟಿಸ್
3) ಅರಿಸ್ಟಾಟಲ್
4) ಫೀಡಿಯಸ್

**43. 1857ರ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಕ್ಷಣದ ಕಾರಣ**

1) ಕೊಬ್ಬು ಸವರಿದ ತೋಟಾಗಳು
2) ಆಂಗ್ಲರು ಜಾರಿಗೊಳಿಸಿದ ಏಕರೀತಿಯ ಕಾನೂನು
3) ಸಾಂಪ್ರದಾಯಿಕ ಕೈಗಾರಿಕೆಗಳ ಅಂತ್ಯ
4) ಭಾರತೀಯ ಸೈನಿಕರಿಗೆ ಕಡಿಮೆ ಸಂಬಳ

**44. ಸರಿಯಾಗಿ ಹೊಂದಿಕೆಯಾಗದ ಜೋಡಿಯನ್ನು ಗುರುತಿಸಿ :**

A. ರೋರ್ಮನ ಸಂತ ಪೀಟರ್‌ನ ಚರ್ಚ್ – ವಾಸ್ತುಶಿಲ್ಪ
B. ಅಂತಿಮ ಭೋಜನ – ಚಿತ್ರಕಲೆ
C. ಪಯೆಟ – ಶಿಲ್ಪಕಲೆ
D. ಮೋಸೆಸ್ – ಚಿತ್ರಕಲೆ

1) A  2) B
3) C  4) D

**45. ಮೃಚ್ಛಕಟಿಕ : ಶೂದ್ರಕ : : ಮತ್ತವಿಲಾಸ ಪ್ರಹಸನ :**

1) ನರಸಿಂಹವರ್ಮನ್
2) ಮಹೇಂದ್ರವರ್ಮನ್
3) ಪುಲಕೇಶಿ - I
4) ಕೀರ್ತಿವರ್ಮನ್

## GEOGRAPHY AND ECONOMICS

**46. The best examples for the broad leafed trees grown more along the Mediterranean coasts are**

1) Cork and Olive trees
2) Neem and Cashew trees
3) Grapes and Pine trees
4) Ash and Poplar trees

**47. The largest salt water lake in the world is**

1) Lake Ladoga
2) Caspian Sea
3) Black Sea
4) Lake Pulicat

**48. The correct group of continents in the descending order of their area is**

1) Asia, Africa, South America, Australia
2) Asia, South America, Africa, Australia
3) Asia, Australia, Africa, South America
4) Asia, Australia, South America, Africa

## ಭೂಗೋಳ ಮತ್ತು ಅರ್ಥಶಾಸ್ತ್ರ

**46. ಮೆಡಿಟರೇನಿಯನ್ ತೀರದುದ್ದಕ್ಕೂ ಬೆಳೆಯುವ ಕೆಲವು ಅಗಲ ಎಲೆಯ ಮರಗಳಿಗೆ ಇವು ಉದಾಹರಣೆಗಳಾಗಿವೆ**

1) ಕಾರ್ಕ್ ಮತ್ತು ಆಲೀವ್ ಮರಗಳು
2) ಬೇವು ಮತ್ತು ಗೋಡಂಬಿ ಮರಗಳು
3) ದ್ರಾಕ್ಷಿ ಮತ್ತು ಪೈನ್ ಮರಗಳು
4) ಆಷ್ ಮತ್ತು ಪಾಪ್ಲರ್ ಮರಗಳು

**47. ಪ್ರಪಂಚದಲ್ಲೇ ಅತ್ಯಂತ ದೊಡ್ಡದಾದ ಉಪ್ಪು ನೀರಿನ ಸರೋವರ**

1) ಲದೋಗ ಸರೋವರ
2) ಕ್ಯಾಸ್ಪಿಯನ್ ಸಮುದ್ರ
3) ಕಪ್ಪು ಸಮುದ್ರ
4) ಪುಲಿಕಾಟ್ ಸರೋವರ

**48. ಖಂಡಗಳ ವಿಸ್ತಾರದ ಆಧಾರದ ಮೇಲೆ ಅವರೋಹಣ ಕ್ರಮದಲ್ಲಿ ಜೋಡಿಸಲಾಗಿರುವ ಸರಿಯಾದ ಗುಂಪು**

1) ಏಷ್ಯಾ, ಆಫ್ರಿಕ, ದಕ್ಷಿಣ ಅಮೇರಿಕ, ಆಸ್ಟ್ರೇಲಿಯ
2) ಏಷ್ಯಾ, ದಕ್ಷಿಣ ಅಮೇರಿಕ, ಆಫ್ರಿಕ, ಆಸ್ಟ್ರೇಲಿಯ
3) ಏಷ್ಯಾ, ಆಸ್ಟ್ರೇಲಿಯ, ಆಫ್ರಿಕ, ದಕ್ಷಿಣ ಅಮೇರಿಕ
4) ಏಷ್ಯಾ, ಆಸ್ಟ್ರೇಲಿಯ, ದಕ್ಷಿಣ ಅಮೇರಿಕ, ಆಫ್ರಿಕ

49. **The common currency used in the Nations of European Union is**

1) Pounds
2) Euro
3) Rubel
4) Yen

50. **In group 'A' list of rivers and in group 'B' list of continents related to those are given. Identify the group that matches :**

| A | B |
|---|---|
| 1. Volga | a) North America |
| 2. Murray | b) Europe |
| 3. Missouri | c) Australia |

1) 1 – c   2 – a   3 – b
2) 1 – b   2 – a   3 – c
3) 1 – a   2 – b   3 – c
4) 1 – b   2 – c   3 – a

49. **ಯುರೋಪಿಯನ್ ಒಕ್ಕೂಟದ ಎಲ್ಲಾ ಸದಸ್ಯ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಚಲಾವಣೆಯಲ್ಲಿರುವ ನಾಣ್ಯ**

1) ಪೌಂಡ್‌ಗಳು
2) ಯುರೋಗಳು
3) ರೂಬೆಲ್‌ಗಳು
4) ಯೆನ್

50. **'A' ಪಟ್ಟಿಯಲ್ಲಿ ನದಿಗಳೂ, 'B' ಪಟ್ಟಿಯಲ್ಲಿ ಅವುಗಳು ಇರುವ ಖಂಡಗಳನ್ನು ಸೂಚಿಸಲಾಗಿದೆ. ಇವುಗಳು ಸರಿಹೊಂದುವ ಉತ್ತರದ ಗುಂಪನ್ನು ಗುರುತಿಸಿ :**

| | |
|---|---|
| 1. ವೋಲ್ಗ | a) ಉತ್ತರ ಅಮೇರಿಕ |
| 2. ಮರ್ರೆ | b) ಯುರೋಪ್ |
| 3. ಮಿಸ್ಸೌರಿ | c) ಆಸ್ಟ್ರೇಲಿಯ |

1) 1 – c   2 – a   3 – b
2) 1 – b   2 – a   3 – c
3) 1 – a   2 – b   3 – c
4) 1 – b   2 – c   3 – a

**51. The water frontiers of Antarctica are**

1) Pacific Ocean, Atlantic Ocean, Arctic Ocean
2) Indian Ocean, Atlantic Ocean, Pacific Ocean
3) Indian Ocean, Pacific Ocean, Arctic Ocean
4) Indian Ocean, Arctic Ocean, Atlantic Ocean

**52. The coast of Norway which lies in the Arctic zone remains free from ice and snow even in winter due to:**

1) North Atlantic warm ocean current
2) Carebean warm current
3) Brazilian warm current
4) Kurasiwa warm current

**53. The difference of 42 kms in the polar diameter and equatorial diameter of earth stands as a proof for :**

1) Inclination of earth
2) Geiod shape of earth
3) Elliptical orbit of earth
4) Rotation and revolution of earth

**51. ಅಂಟಾರ್ಕ್‌ಟಿಕ ಖಂಡದ ಜಲಮೇರೆಗಳು**

1) ಫೆಸಿಫಿಕ್ ಸಾಗರ, ಅಟ್ಲಾಂಟಿಕ್ ಸಾಗರ, ಆರ್ಕ್‌ಟಿಕ್ ಸಾಗರ
2) ಹಿಂದೂಮಹಾಸಾಗರ, ಅಟ್ಲಾಂಟಿಕ್ ಸಾಗರ, ಫೆಸಿಫಿಕ್ ಸಾಗರ
3) ಹಿಂದೂಮಹಾಸಾಗರ, ಫೆಸಿಫಿಕ್ ಸಾಗರ, ಆರ್ಕ್‌ಟಿಕ್ ಸಾಗರ
4) ಹಿಂದೂಮಹಾಸಾಗರ, ಆರ್ಕ್‌ಟಿಕ್ ಸಾಗರ, ಅಟ್ಲಾಂಟಿಕ್ ಸಾಗರ

**52. ಆರ್ಕ್‌ಟಿಕ್ ವಲಯದಲ್ಲಿರುವ ನಾರ್ವೆಯ ಕರಾವಳಿಯು ಚಳಿಗಾಲದಲ್ಲಿ ಕೂಡಾ ಹಿಮ ಮತ್ತು ಮಂಜುಗಡ್ಡೆಗಳಿಂದ ಮುಕ್ತವಾಗಿರಲು ಕಾರಣವಾಗಿರುವ ಅಂಶ :**

1) ಉತ್ತರ ಅಟ್ಲಾಂಟಿಕ್ ಉಷ್ಣೋದಕ ಪ್ರವಾಹ
2) ಕೆರೇಬಿಯನ್ ಉಷ್ಣೋದಕ ಪ್ರವಾಹ
3) ಬ್ರೆಜಿಲಿಯನ್ ಉಷ್ಣೋದಕ ಪ್ರವಾಹ
4) ಕುರಾಸಿವೋ ಉಷ್ಣೋದಕ ಪ್ರವಾಹ

**53. ಭೂಮಿಯ ಧೃವೀಯ ವ್ಯಾಸ ಮತ್ತು ಸಮಭಾಜಕ ವೃತ್ತದ ವ್ಯಾಸದ ನಡುವಿನ 42 ಕಿ.ಮೀ. ವ್ಯತ್ಯಾಸವು ಈ ಕೆಳಗಿನ ಅಂಶಗಳನ್ನು ಸ್ಪಷ್ಟಪಡಿಸುತ್ತದೆ :**

1) ಭೂಮಿಯ ಓರೆ
2) ಭೂಮಿಯ ಗೋಳಾಕಾರ
3) ಭೂಮಿಯ ಅಂಡಾಕಾರ ಪಥ
4) ಭೂಮಿಯ ದೈನಂದಿನ ಮತ್ತು ವಾರ್ಷಿಕ ಚಲನೆ

**54. The continent in which equator passes at the central part :**

1) North America
2) South America
3) Asia
4) Africa

**55. Identify the correct statement :**

1) Surface waves are highly destructive
2) Secondary waves of earthquakes can pass through solid, liquid and gaseous matters
3) Surface waves of earthquakes are the fastest waves
4) Primary waves of earthquakes are the slowest waves

**56. The physical and intellectual work done in return for money is called :**

1) Consumption
2) Production
3) Labour
4) Profit

**54. ಸಮಭಾಜಕ ವೃತ್ತವು ಈ ಖಂಡದ ಮಧ್ಯಭಾಗದಲ್ಲಿ ಹಾದು ಹೋಗುತ್ತದೆ :**

1) ಉತ್ತರ ಅಮೇರಿಕ
2) ದಕ್ಷಿಣ ಅಮೇರಿಕ
3) ಏಷ್ಯ
4) ಆಫ್ರಿಕ

**55. ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ :**

1) ಭೂ ಕಂಪನದ ಮೇಲ್ಮೈ ಅಲೆಗಳು ಅತ್ಯಂತ ಹಾನಿಕಾರಕ
2) ಭೂ ಕಂಪನದ ದ್ವಿತೀಯ ಅಲೆಗಳು ಘನ, ದ್ರವ ಮತ್ತು ಅನಿಲಗಳ ಮೂಲಕ ಚಲಿಸಬಲ್ಲವು
3) ಭೂ ಕಂಪನದ ಮೇಲ್ಮೈ ಅಲೆಗಳು ಅತ್ಯಂತ ವೇಗಗತಿಯ ಅಲೆಗಳು
4) ಭೂ ಕಂಪನದ ಪ್ರಾಥಮಿಕ ಅಲೆಗಳು ಅತ್ಯಂತ ನಿಧಾನಗತಿಯ ಅಲೆಗಳು

**56. ಹಣದ ಪ್ರತಿಫಲಕ್ಕಾಗಿ ಮಾಡುವ ದೈಹಿಕ ಮತ್ತು ಬೌದ್ಧಿಕ ಕೆಲಸವನ್ನು ಹೀಗೆ ಕರೆಯಬಹುದು :**

1) ಅನುಭೋಗ
2) ಉತ್ಪಾದನೆ
3) ಶ್ರಮ
4) ಲಾಭ

**57. In Kolar gold mining is stopped because :**

1) We have decided to keep it as a reserve
2) The gold found here is very high quality one
3) The machineries used here are very old and out dated
4) The gold is no longer available

**58. The frist ship to circum – navigate the world was :**

1) Verginia
2) Victor
3) Victoria
4) Venicia

**59. In 21st century the producers are able to attract consumers from all parts of the world mainly due to**

1) Banks giving loans
2) Electronic advertisement media and tele markets
3) Privatization and Nationalization of Industries
4) Production of sub standard goods

**60. Identify the statement which increases the 'green house' effect :**

1) Conservation of forests
2) More use of wind power and solar power
3) Controlling emission of poisonous gasses
4) Use of underground source of water

**57. ಕೋಲಾರದಲ್ಲಿ ಚಿನ್ನದ ಗಣಿಗಾರಿಕೆಯನ್ನು ನಿಲ್ಲಿಸಲಾಗಿದೆ ಏಕೆಂದರೆ :**

1) ಆಪತ್ಕಾಲಕ್ಕಾಗಿ ಕಾದಿರಿಸಲು ನಿರ್ಧರಿಸಿದ್ದೇವೆ
2) ಇಲ್ಲಿ ಸಿಗುವ ಚಿನ್ನ ಉತ್ತಮ ಗುಣಮಟ್ಟದ್ದಾಗಿದೆ
3) ಇಲ್ಲಿ ಬಳಸುತ್ತಿದ್ದ ಯಂತ್ರೋಪಕರಣಗಳು ಹಳತು ಮತ್ತು ಕಳಪೆಯದ್ದಾಗಿದೆ
4) ಇಲ್ಲಿ ಚಿನ್ನ ಅಧಿಕವಾಗಿ ದೊರೆಯುತ್ತಿಲ್ಲ

**58. ಪ್ರಪಂಚದ ಸುತ್ತ ಜಲಯಾನ ಕೈಗೊಂಡ ಮೊಟ್ಟ ಮೊದಲ ನೌಕೆ**

1) ವರ್ಜೀನಿಯ
2) ವಿಕ್ಟರ್
3) ವಿಕ್ಟೋರಿಯ
4) ವೆನಿಷಿಯ

**59. 21ನೇ ಶತಮಾನದಲ್ಲಿ ಉತ್ಪಾದಕರು ವಿಶ್ವದೆಲ್ಲೆಡೆ ಶೀಘ್ರವಾಗಿ ಗ್ರಾಹಕರನ್ನು ಆಕರ್ಷಿಸಲು ಕಾರಣ :**

1) ಬ್ಯಾಂಕ್‌ಗಳು ಸಾಲ ಕೊಡುವುದು
2) ವಿದ್ಯುನ್ಮಾನ ಜಾಹೀರಾತು ಮತ್ತು ಟೆಲಿಮಾರುಕಟ್ಟೆ
3) ಕೈಗಾರಿಕೆಗಳ ಖಾಸಗೀಕರಣ ಮತ್ತು ರಾಷ್ಟ್ರೀಕರಣ
4) ಕಳಪೆ ಗುಣಮಟ್ಟದ ವಸ್ತುಗಳ ಉತ್ಪಾದನೆ

**60. 'ಹಸಿರು ಮನೆ' ಪರಿಣಾಮವನ್ನುಂಟು ಮಾಡುವ ಹೇಳಿಕೆಯನ್ನು ಗುರುತಿಸಿ :**

1) ಕಾಡಿನ ಸಂರಕ್ಷಣೆ
2) ಪವನಶಕ್ತಿ ಮತ್ತು ಸೌರಶಕ್ತಿ ಬಳಕೆ
3) ವಿಷಾನಿಲ ಸೋರುವಿಕೆಯ ತಡೆ
4) ಅಂತರ್‌ಜಲ ಬಳಕೆ

## POLITICAL SCIENCE & SOCIOLOGY

**61. There is no state citizenship in India. Indians acquire their citizenship not on the basis of their place of residence or the province (state) that they belong to. This type of citizenship is termed as**

1) Single citizenship
2) Duel citizenship
3) Provincial citizenship
4) Multiple citizenship

**62. Among the following who were considered as the first people to give 'politics' the status of an independent science**

1) Egyptians
2) Babylonians
3) Indians
4) Greeks

**63. Identify the merit of Democracy from the following alternatives**

1) Conducting elections is expensive and time consuming
2) Defections have resulted in unstable governments
3) Decisions are taken after debate and discussion
4) Lengthy procedure is followed to make laws

## ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ

**61. ಭಾರತದಲ್ಲಿ ರಾಜ್ಯ ಅಥವಾ ಪ್ರಾಂತೀಯ ಪೌರತ್ವವಿರುವುದಿಲ್ಲ. ಭಾರತೀಯರು ತಾವು ವಾಸಿಸುವ ಪ್ರದೇಶ ಅಥವಾ ಪ್ರಾಂತ್ಯ (ರಾಜ್ಯ)ದ ಆಧಾರದ ಮೇಲೆ ಪೌರತ್ವವನ್ನು ಹೊಂದಿರುವುದಿಲ್ಲ. ಈ ಬಗೆಯ ಪೌರತ್ವಕ್ಕೆ ಇರುವ ಮತ್ತೊಂದು ಹೆಸರು**

1) ಏಕ ಪೌರತ್ವ
2) ದ್ವಿ ಪೌರತ್ವ
3) ಪ್ರಾಂತೀಯ ಪೌರತ್ವ
4) ಬಹು ಬಗೆಯ ಪೌರತ್ವ

**62. ಈ ಕೆಳಗೆ ತಿಳಿಸಿರುವವರಲ್ಲಿ, 'ರಾಜ್ಯಶಾಸ್ತ್ರ'ಕ್ಕೆ ಒಂದು ಸ್ವತಂತ್ರ ವಿಜ್ಞಾನದ ಸ್ಥಾನಮಾನವನ್ನು ನೀಡಿದ ಮೊದಲಿಗರು**

1) ಈಜಿಪ್ಟಿಯನ್ನರು
2) ಬೆಬಿಲೋನಿಯನ್ನರು
3) ಭಾರತೀಯರು
4) ಗ್ರೀಕರು

**63. ಕೆಳಗೆ ನೀಡಿರುವ ಪರ್ಯಾಯಗಳಲ್ಲಿ ಯಾವ ಒಂದು ಅಂಶವು ಪ್ರಜಾಪ್ರಭುತ್ವದ ಅನುಕೂಲ ಅಂಶವಾಗಿದೆ ?**

1) ಚುನಾವಣೆಗಳನ್ನು ನಡೆಸುವುದು ಅಧಿಕ ವೆಚ್ಚದಾಯಕ ಹಾಗೂ ಕಾಲಾವಕಾಶದಿಂದ ಕೂಡಿರುತ್ತದೆ
2) ಪಕ್ಷಾಂತರಗೊಳ್ಳುವ ಕ್ರಿಯೆಯಿಂದ ಸರ್ಕಾರಗಳು ಅಸ್ಥಿರಗೊಳ್ಳುತ್ತವೆ
3) ನಿರ್ಧಾರಕ ತೀರ್ಪುಗಳು ಸಾರ್ವಜನಿಕರ ಅಭಿಪ್ರಾಯ ಮತ್ತು ಚರ್ಚೆಗಳ ಮೂಲಕ ನಿರ್ಧರಿಸಲಾಗುತ್ತವೆ
4) ಕಾನೂನುಗಳನ್ನು ರೂಪಿಸುವುದು ದೀರ್ಘ ಪ್ರಕ್ರಿಯೆಯಿಂದ ಕೂಡಿದೆ

**64. Voter must produce his/her Electoral Photo Identity card (EPIC) or any other document specified by the government at the time of voting. The main objective of introducing this type of procedure is to**

1) verify the voting age
2) prevent impersonation
3) make corrections in electoral roll
4) provide an opportunity to vote in all the places of his convenience

**65. Importance of 1955 in India is**

1) The First General Election was held to Parliament
2) Fundamental duties were incorporated
3) Fundamental rights were granted to citizens
4) Citizenship Act was enacted by the Parliament

**66. The organ of U.N. in which 'veto' power can be exercised ?**

1) Security Council
2) Secretariat
3) International Court of Justice
4) Economic and Social Council

**64. ಮತದಾನದ ವೇಳೆಯಲ್ಲಿ ಮತದಾರನು ತನ್ನ ಮತದಾರರ ಛಾಯ ಪ್ರತಿಯ ಗುರುತಿನ ಚೀಟಿಯನ್ನು ಅಥವಾ ಸರ್ಕಾರ ಸೂಚಿಸುವ ಇತರೆ ಗುರುತಿನ ಪುರಾವೆಗಳನ್ನು ಅಧಿಕಾರಿಗಳಿಗೆ ನೀಡಬೇಕಾಗಿರುತ್ತದೆ. ಈ ಕ್ರಮವನ್ನು ಜಾರಿಗೆ ತಂದ ಮುಖ್ಯ ಉದ್ದೇಶ**

1) ಮತದಾನ ಮಾಡುವವರ ವಯಸ್ಸನ್ನು ಪರಿಶೀಲಿಸಲು
2) ಅನ್ಯವ್ಯಕ್ತಿಯು ಮತದಾನ ಮಾಡುವ ಕ್ರಿಯೆಯನ್ನು ತಡೆಯುವುದು
3) ಮತದಾರರ ಪಟ್ಟಿಯಲ್ಲಿ ತಿದ್ದುಪಡಿ ಮಾಡುವ ಸಲುವಾಗಿ
4) ತನಗೆ ಅನುಕೂಲತೆ ಇರುವ ಎಲ್ಲಾ ಸ್ಥಳಗಳಲ್ಲಿ ಮತದಾನ ಮಾಡಲು ಅವಕಾಶ ಕಲ್ಪಿಸಿಕೊಡುವ ಸಲುವಾಗಿ

**65. ಭಾರತದಲ್ಲಿ 1955ನೇ ಇಸವಿಯ ಪ್ರಾಮುಖ್ಯತೆ :**

1) ಸಂಸತ್ತಿಗಾಗಿ ಪ್ರಥಮ ಬಾರಿಗೆ ಚುನಾವಣೆ ನಡೆಸಲಾಯಿತು
2) ಮೂಲಭೂತ ಕರ್ತವ್ಯಗಳನ್ನು ಅಳವಡಿಸಲಾಯಿತು
3) ಪೌರರಿಗೆ ಮೂಲಭೂತ ಹಕ್ಕುಗಳನ್ನು ನೀಡಲಾಯಿತು
4) ಸಂಸತ್ತು ಪೌರತ್ವ ಕಾಯಿದೆಯನ್ನು ಜಾರಿಗೆ ತಂದಿತು

**66. ವಿಶ್ವಸಂಸ್ಥೆಯಲ್ಲಿ 'ವಿಟೋ' ಅಧಿಕಾರವನ್ನು ಚಲಾಯಿಸಬಹುದಾಗಿರುವ ಅಂಗ ಸಂಸ್ಥೆ**

1) ಭದ್ರತಾ ಮಂಡಳಿ
2) ಸಚಿವಾಲಯ
3) ಅಂತಾರಾಷ್ಟ್ರೀಯ ನ್ಯಾಯಾಲಯ
4) ಆರ್ಥಿಕ ಮತ್ತು ಸಾಮಾಜಿಕ ಮಂಡಳಿ

**67. India is a sovereign nation. The meaning of this is**

1) There is no discrimination between the rich and the poor
2) All religions are treated as same and equal
3) The people elect their representatives to form the government
4) We are free to make our laws and no country can interfere in this

**68. A case suitable to be presented in the Consumer Court is**

1) not providing admission in the school
2) not providing suitable employment in a factory
3) cheated by a merchant by selling a defective material
4) cheated by a money lender by charging higher rate of interest

**69. The form of society that is considered as the oldest is**

1) Cattle rearing
2) Hunting and food gathering
3) Farming society
4) Industrial society

**70. The event responsible for introducing the disarmament treaty was**

1) Indo – Pak War
2) Indo – China War
3) Cold War between USA and USSR
4) Iraq – Iran War

**67. ಭಾರತ ಸಾರ್ವಭೌಮತ್ವ ರಾಷ್ಟ್ರವಾಗಿದೆ. ಇದರ ಅರ್ಥ**

1) ಶ್ರೀಮಂತ ಹಾಗೂ ಬಡ ವರ್ಗಗಳ ನಡುವೆ ಯಾವುದೇ ತಾರತಮ್ಯತೆ ಇಲ್ಲ
2) ಎಲ್ಲಾ ಧರ್ಮಗಳನ್ನು ಸಮಾನ ರೀತಿಯಲ್ಲಿ ಕಾಣುವುದು
3) ಸರ್ಕಾರದ ರಚನೆಗೆ ಪ್ರಜೆಗಳು ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ
4) ನಮ್ಮ ಕಾನೂನುಗಳನ್ನು ರಚಿಸುವ ಅಧಿಕಾರವನ್ನು ನಾವು ಹೊಂದಿರುತ್ತೇವೆ. ಯಾವುದೇ ಇತರೇ ರಾಷ್ಟ್ರಗಳು ಇದರಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರವಿರುವುದಿಲ್ಲ

**68. ಗ್ರಾಹಕರ ನ್ಯಾಯಾಲಯದಲ್ಲಿ ಮಂಡಿಸಲು ಸೂಕ್ತವಾಗಿರುವ ಒಂದು ವಿಷಯ**

1) ಶಾಲೆಗೆ ದಾಖಲು ಮಾಡಿಕೊಳ್ಳದೇ ಇರುವುದು
2) ಕಾರ್ಖಾನೆಯಲ್ಲಿ ಸೂಕ್ತ ಉದ್ಯೋಗ ನೀಡದಿರುವುದು
3) ವ್ಯಾಪಾರಿಯು ದೋಷಪೂರಿತವಾದ ವಸ್ತುವನ್ನು ಮಾರಿ ಮೋಸಗೊಳಿಸಿರುವುದು
4) ಲೇವಾದೇವಿ ಮಾಡುವವನು (ಹಣವನ್ನು ಸಾಲವಾಗಿ ನೀಡುವವನು) ಅಧಿಕ ಬಡ್ಡಿಯನ್ನು ಕಸಿದು ಮೋಸಗೊಳಿಸಿರುವುದು

**69. ಮಾನವ ಸಮಾಜದಲ್ಲಿ ಅತ್ಯಂತ ಪ್ರಾಚೀನವಾದ ಸಮಾಜ**

1) ಪಶುಪಾಲನ ಸಮಾಜ
2) ಬೇಟೆಯಾಡುವ ಮತ್ತು ಆಹಾರ ಸಂಗ್ರಹಿಸುವ ಸಮಾಜಗಳು
3) ಕೃಷಿ ಸಮಾಜ
4) ಕೈಗಾರಿಕಾ ಸಮಾಜ

**70. ನಿಶ್ಶಸ್ತ್ರೀಕರಣ ಒಪ್ಪಂದ ಜಾರಿಗೆ ತರಲು ಕಾರಣವಾದ ಘಟನೆ**

1) ಭಾರತ – ಪಾಕ್ ಯುದ್ಧ
2) ಭಾರತ – ಚೀನಾ ಯುದ್ಧ
3) ಅಮೇರಿಕಾ (USA) ಮತ್ತು ಸೋವಿಯತ್ ಯೂನಿಯನ್ (USSR) ನಡುವಣದ ಶೀತಲ ಸಮರ
4) ಇರಾಕ್ – ಇರಾನ್ ಯುದ್ಧ

## MATHEMATICS

**71. The difference of two numbers is 1400. On dividing the larger number by the smaller number, we get quotient 3 and remainder 12. The smaller number is**

1) 436
2) 572
3) 634
4) 694

**72. The number which cannot be the square of a natural number is**

1) 15876
2) 12321
3) 12242
4) 11664

**73. The mean weight of 10 persons increases by 2.5 kilogram when a new person replaces one of them weighing 60 kilogram. The weight of new person is**

1) 85 kg
2) 62.5 kg
3) 48.5 kg
4) 25 kg

## ಗಣಿತ

**71. ಎರಡು ಸಂಖ್ಯೆಗಳ ವ್ಯತ್ಯಾಸ 1400. ದೊಡ್ಡ ಸಂಖ್ಯೆಯನ್ನು ಚಿಕ್ಕ ಸಂಖ್ಯೆಯಿಂದ ಭಾಗಿಸಿದಾಗ ಭಾಗಲಬ್ಧ 3 ಮತ್ತು ಶೇಷ 12 ಬರುತ್ತದೆ. ಅವುಗಳಲ್ಲಿ ಚಿಕ್ಕ ಸಂಖ್ಯೆ**

1) 436
2) 572
3) 634
4) 694

**72. ಒಂದು ಸ್ವಾಭಾವಿಕ ಸಂಖ್ಯೆಯ ವರ್ಗ ಸಂಖ್ಯೆಯಾಗಲು ಸಾಧ್ಯವಾಗದ ಸಂಖ್ಯೆ**

1) 15876
2) 12321
3) 12242
4) 11664

**73. 10 ಜನರಲ್ಲಿ 60 ಕಿಗ್ರಾಂ ತೂಕವಿರುವ ಒಬ್ಬ ವ್ಯಕ್ತಿಯ ಸ್ಥಾನವನ್ನು ಮತ್ತೊಬ್ಬ ವ್ಯಕ್ತಿಯು ತುಂಬಿದಾಗ ಸರಾಸರಿ ತೂಕವು 2.5 ಕಿಗ್ರಾಂನಷ್ಟು ಹೆಚ್ಚಾಗುತ್ತದೆ. ಹಾಗಾದರೆ, ಹೊಸ ವ್ಯಕ್ತಿಯ ತೂಕ**

1) 85 ಕಿಗ್ರಾಂ
2) 62.5 ಕಿಗ್ರಾಂ
3) 48.5 ಕಿಗ್ರಾಂ
4) 25 ಕಿಗ್ರಾಂ

**74. A trader purchases 20 kg rice at ₹ 25 per kg and 30 kg rice at ₹ 30 per kg. He mixes the two varieties and sells at ₹ 35 per kg. His profit percentage is**

1) 25%
2) 30%
3) 35%
4) 40%

**75. The sum of present age of father and his son is 60 year. 6 year ago father's age was five times the age of his son. After 5 years son's age will be**

1) 12 year
2) 14 year
3) 16 year
4) 19 year

**76. Ravi starts from his home and drives 38 km to North and then 52 km to South. How far he is now from his home finally ?**

1) 90 km
2) 52 km
3) 38 km
4) 14 km

**74. ವ್ಯಾಪಾರಿಯೊಬ್ಬನು 20 ಕಿಗ್ರಾಂ ಅಕ್ಕಿಯನ್ನು ಪ್ರತಿ ಕಿಗ್ರಾಂಗೆ ₹ 25 ರಂತೆ ಮತ್ತು 30 ಕಿಗ್ರಾಂ ಅಕ್ಕಿಯನ್ನು ಪ್ರತಿ ಕಿಗ್ರಾಂಗೆ ₹ 30 ರಂತೆ ಖರೀದಿಸುತ್ತಾನೆ. ಆ ಎರಡೂ ವಿಧದ ಅಕ್ಕಿಯನ್ನು ಬೆರೆಸಿ ಪ್ರತಿ ಕಿಗ್ರಾಂಗೆ ₹ 35 ರಂತೆ ಮಾರುತ್ತಾನೆ. ಅವನ ಶೇಕಡಾ ಲಾಭ**

1) 25%
2) 30%
3) 35%
4) 40%

**75. ತಂದೆ ಮತ್ತು ಮಗನ ಪ್ರಸ್ತುತ ವಯಸ್ಸಿನ ಮೊತ್ತ 60 ವರ್ಷ. 6 ವರ್ಷದ ಹಿಂದೆ ತಂದೆಯ ವಯಸ್ಸು ಮಗನ ವಯಸ್ಸಿನ ಐದರಷ್ಟಿತ್ತು. 5 ವರ್ಷದ ನಂತರ ಮಗನ ವಯಸ್ಸು**

1) 12 ವರ್ಷ
2) 14 ವರ್ಷ
3) 16 ವರ್ಷ
4) 19 ವರ್ಷ

**76. ರವಿ ತನ್ನ ಮನೆಯಿಂದ ಆರಂಭಿಸಿ 38 ಕಿಮೀ ಉತ್ತರಕ್ಕೆ ಪ್ರಯಾಣಿಸುತ್ತಾನೆ, ನಂತರ ಅಲ್ಲಿಂದ ದಕ್ಷಿಣ ದಿಕ್ಕಿನಲ್ಲಿ 52 ಕಿಮೀ ಪ್ರಯಾಣಿಸುತ್ತಾನೆ. ಈಗ ಅವನು ಅಂತಿಮವಾಗಿ ತನ್ನ ಮನೆಯಿಂದ ಎಷ್ಟು ದೂರದಲ್ಲಿದ್ದಾನೆ ?**

1) 90 ಕಿಮೀ
2) 52 ಕಿಮೀ
3) 38 ಕಿಮೀ
4) 14 ಕಿಮೀ

**77. A number when increased by 15% becomes equal to 414. The number is**

1) 621
2) 360
3) 267
4) 162

**78. The value of $(x^{a+b})^{a-b} \times (x^{b+c})^{b-c} \times (x^{c+a})^{c-a}$ to equal to :**

1) $x^{a+b+c}$
2) x
3) 0
4) 1

**79. The area of rectangular field is 180 square meter and its breadth is 12 meter. The perimeter of the field is**

1) 27 m
2) 54 m
3) 15 m
4) 18 m

**80. Three solid cubes of sides 1cm, 6 cm and 8 cm are melted together to form a new cube. The edge of the cube so formed is**

1) 15 cm
2) 14 cm
3) 9 cm
4) 7 cm

**77. ಒಂದು ಸಂಖ್ಯೆಯನ್ನು 15% ರಷ್ಟು ಹೆಚ್ಚಿಸಿದಾಗ 414ಕ್ಕೆ ಸಮನಾಗುತ್ತದೆ. ಆ ಸಂಖ್ಯೆ**

1) 621
2) 360
3) 267
4) 162

**78.** $(x^{a+b})^{a-b} \times (x^{b+c})^{b-c} \times (x^{c+a})^{c-a}$ **ರ ಬೆಲೆ :**

1) $x^{a+b+c}$
2) x
3) 0
4) 1

**79. ಒಂದು ಆಯತಾಕಾರದ ಮೈದಾನದ ವಿಸ್ತೀರ್ಣ 180 ಚದರ ಮೀಟರ್ ಇದ್ದು ಅದರ ಅಗಲ 12 ಮೀಟರ್ ಇದೆ. ಆ ಮೈದಾನದ ಸುತ್ತಳತೆ**

1) 27 ಮೀಟರ್
2) 54 ಮೀಟರ್
3) 15 ಮೀಟರ್
4) 18 ಮೀಟರ್

**80. 1 ಸೆಂಮೀ, 6 ಸೆಂಮೀ, 8 ಸೆಂಮೀ ಬಾಹುಗಳುಳ್ಳ ಮೂರು ಘನಗಳನ್ನು ಒಟ್ಟಾಗಿ ಕರಗಿಸಿ ಹೊಸ ಘನವನ್ನು ಪಡೆಯಲಾಗಿದೆ. ಹೀಗೆ ಉಂಟಾದ ಘನದ ಅಂಚಿನ ಅಳತೆ**

1) 15 ಸೆಂಮೀ
2) 14 ಸೆಂಮೀ
3) 9 ಸೆಂಮೀ
4) 7 ಸೆಂಮೀ

**81. Two consecutive numbers is such that two-fifths of the smaller number exceeds two-ninths of the larger number by 4. The two numbers are**

1) 15, 17
2) 25, 27
3) 35, 37
4) 45, 47

**82. The perimeter of a parallelogram is 42 cm and the ratio of adjacent sides is 3:4. The sides of parallelogram are**

1) 3 cm, 4 cm
2) 6 cm, 8 cm
3) 9 cm, 12 cm
4) 12 cm, 16 cm

**83. The set of numbers that could possibly be the lengths of the sides of a triangle is**

1) 2.5, 1.5, 4
2) 2, 10, 15
3) 2, 5, 7
4) 2, 3, 4

**84. Three exterior angles of a triangle are 120°, 140° and x°. The value of x° is**

1) 40°
2) 60°
3) 80°
4) 100°

**81. ಎರಡು ಕ್ರಮಾನುಗತ ಸಂಖ್ಯೆಗಳಲ್ಲಿ ಚಿಕ್ಕ ಸಂಖ್ಯೆಯು ಎರಡನೇ ಐದರಷ್ಟು ದೊಡ್ಡ ಸಂಖ್ಯೆಯ ಎರಡನೇ ಒಂಭತ್ತಕ್ಕಿಂತ 4 ಹೆಚ್ಚಾಗಿದೆ. ಆ ಎರಡು ಸಂಖ್ಯೆಗಳು**

1) 15, 17
2) 25, 27
3) 35, 37
4) 45, 47

**82. ಸಮಾಂತರ ಚತುರ್ಭುಜದ ಸುತ್ತಳತೆ 42 ಸೆಂಮೀ ಮತ್ತು ಪಾರ್ಶ್ವ ಬಾಹುಗಳು 3:4 ಅನುಪಾತದಲ್ಲಿವೆ. ಸಮಾಂತರ ಚತುರ್ಭುಜದ ಬಾಹುಗಳ ಅಳತೆ**

1) 3 ಸೆಂಮೀ, 4 ಸೆಂಮೀ
2) 6 ಸೆಂಮೀ, 8 ಸೆಂಮೀ
3) 9 ಸೆಂಮೀ, 12 ಸೆಂಮೀ
4) 12 ಸೆಂಮೀ, 16 ಸೆಂಮೀ

**83. ಒಂದು ತ್ರಿಭುಜದ ಬಾಹುಗಳ ಉದ್ದಗಳಾಗಬಹುದಾದ ಸಂಖ್ಯೆಗಳ ಗುಂಪು**

1) 2.5, 1.5, 4
2) 2, 10, 15
3) 2, 5, 7
4) 2, 3, 4

**84. ಒಂದು ತ್ರಿಭುಜದ ಬಹಿರ್ಕೋನಗಳು 120°, 140° ಮತ್ತು x° ಇವೆ. ಕೋನ x° ಯ ಅಳತೆ**

1) 40°
2) 60°
3) 80°
4) 100°

**85. If $\frac{x}{\sqrt{50}} = \frac{\sqrt{98}}{x}$, then the value of 'x' is**

1) $35\sqrt{2}$
2) $\sqrt{70}$
3) $70\sqrt{2}$
4) 80

**86. In what time the simple interest on a certain sum is 0.15 times the principal at 10% per anum rate of interest ?**

1) 10 year
2) 12 year
3) 15 year
4) 20 year

**87. $16^{-2}$ when expressed as an exponential number with base 4 is equal to**

1) $4^{-4}$
2) $4^{4}$
3) $4^{6}$
4) $4^{-6}$

**85. $\frac{x}{\sqrt{50}} = \frac{\sqrt{98}}{x}$ ಆದರೆ, 'x' ನ ಬೆಲೆ**

1) $35\sqrt{2}$
2) $\sqrt{70}$
3) $70\sqrt{2}$
4) 80

**86. ಯಾವ ಅವಧಿಯಲ್ಲಿ ಒಂದು ಮೊತ್ತವು 10% ರ ವಾರ್ಷಿಕ ಸರಳ ಬಡ್ಡಿ ದರದಲ್ಲಿ ಅಸಲಿನ 0.15 ರಷ್ಟಾಗುತ್ತದೆ ?**

1) 10 ವರ್ಷ
2) 12 ವರ್ಷ
3) 15 ವರ್ಷ
4) 20 ವರ್ಷ


**87. $16^{-2}$ ರ ಆಧಾರ 4 ರ ಘಾತಾಂಕ ಸಂಖ್ಯೆಯ ರೂಪ**

1) $4^{-4}$
2) $4^{4}$
3) $4^{6}$
4) $4^{-6}$

**88. The simplified form of $(0.7)^2 - (0.3)^2$ is**

1) 0.4
2) 0.04
3) 0.21
4) 0.49

**89. In the adjoining figure $\angle ABD = 135^\circ$ and $\angle BCE = 125^\circ$. Which among the given options is true ?**




1) AB > AC
2) AB < AC
3) AB = AC
4) AB = BC = CA


**90. Hari was given a discount of 12% on a book. If the actual price of the book before discount was ₹ 400, the amount of discount is**

1) ₹ 48
2) ₹ 60
3) ₹ 72
4) ₹ 84

**88.** $(0.7)^2 - (0.3)^2$ ರ ಸರಳ ರೂಪ

1) 0.4
2) 0.04
3) 0.21
4) 0.49

**89.** ಇಲ್ಲಿ ಕೊಟ್ಟಿರುವ ಚಿತ್ರದಲ್ಲಿ $\angle ABD = 135^\circ$ ಮತ್ತು $\angle BCE = 125^\circ$. ಕೊಟ್ಟಿರುವ ಆಯ್ಕೆಗಳಲ್ಲಿ ಯಾವುದು ಸತ್ಯ ?




1) AB > AC
2) AB < AC
3) AB = AC
4) AB = BC = CA

**90.** ಹರಿಗೆ ಒಂದು ಪುಸ್ತಕದ ಮೇಲೆ **12%** ರಿಯಾಯಿತಿ ನೀಡಲಾಗಿದೆ. ರಿಯಾಯಿತಿಗಿಂತ ಮುಂಚಿನ ಪುಸ್ತಕದ ಬೆಲೆ **₹ 400,** ಆದರೆ ರಿಯಾಯಿತಿ ಮೊತ್ತ

1) ₹ 48
2) ₹ 60
3) ₹ 72
4) ₹ 84